
# ಮಾತು ಬಿಟ್ಟಿದ್ದೇನೆ



ಕಲೆ: ಡಿ.ಕೆ. ರಮೇಶ್

ಸಮುದ್ರದ ಜೊತೆ
ಮಾತು ಬಿಟ್ಟಿದ್ದೇನೆ
ಎಂದರೆ ನೀನು ನಗುವೆ

ಅಚ್ಚರಿಯಾಗುತ್ತದೆ ನನಗೆ
ಕನಸಿನಲ್ಲಿ ಕಂಡ ಸಮುದ್ರ
ಎದುರಿಗಿರುವ ನೀರರಾಶಿ
ಒಂದೇ ಅಥವಾ ಬೇರೆ ಬೇರೆಯೆ?

ಅಲ್ಲಿ ಕಂಡಾಗ ಬಿಳಿ ನೊರೆಯ
ಉಕ್ಕಿಸಿ ಉಕ್ಕಿಸಿ
ಹುಚ್ಚು ಹುಚ್ಚಾಗಿ ಆಡುತ್ತಿದ್ದೆ
ಕೊನೆಯ ಬಸ್ಸು ಹೋದ ಮೇಲೂ
ಮೀನಿನ ಪಾಲು ಅರಸುತ್ತಿರುವವರು
ಪಾತಿದೋಣಿ ಕಾಯುತ್ತ
ನಿಂತೇ ಇದ್ದಾರೆ.

ಇಲ್ಲಿ ಅರ್ಥಮರ್ಥ ಬರೆದ
ಕವಿತೆಯಾಗಿ ಕಥೆ ಕಟ್ಟುತ್ತಿರುವೆ
ನೆಪಗಳ ನೇವರಿಸುವುದು ಸಲೀಸಾಗಿದೆ
ಈಗ ಇರುಳ ಓಡಿಸುವ
ಎಲ್ಇಡಿ ಬೆಳಕಿಗೆ
ನಿನ್ನ ಕಣ್ಣುಗಳು ಹೊಳೆಯುತ್ತವೆ
ಕಾರ್ಗತ್ತಲು ಸೀಳಿ ಬರುವ
ಮಿಂಚುಹುಳಗಳನ್ನು
ಯಾರೂ ಕಾಯುತ್ತಿಲ್ಲ

ನಿನ್ನ ಇರುವನ್ನು ಚೂರು
ಅನುಭವಿಸಲು ನಿಧಾನ ಕಾಲು
ಮುಂದೆ ಚಾಚುತ್ತೇನೆ
ಅಲೆಯೊಂದು ಹಾದು
ದಂಡೆ ಹಾಗೂ ಪಾದಗಳನು
ಮೀಯಿಸಿಬಿಡುತ್ತದೆ.
ತತಕ್ಷಣ ನಾಪತ್ತೆಯಾಗುವ
ಮರಿ ಏಡಿಗಳ ಮರಳ ಚಿತ್ತಾರ
ತೆರೆಯೊಡನೆ ಮಾತಿಗಿಳಿದಿದೆ.
ಸಾರಿಗೆ ಮೀನಿನ ತುಂಡಿಲ್ಲ
ಎಂದು ಗಾಳ ಹಾಕಿ ಕುಳಿತವನು
ಒಣ ಮೀನ ಗಾಢ ಗಂಧದ ಜೊತೆ
ಕರಗಿ ಹೋಗಿದ್ದಾನೆ.

ಇಷ್ಟಾದರೂ...

ನೀನು ನೊರೆಯಾಗಿ
ಬಿಳಿಯಾಗಿ, ಇಡಿಯಾಗಿ ಹರಡಿ
ಬೇರೆ ಬೇರೆ ಬಣ್ಣದಲಿ ಹೊಳೆದು
ದಿಗಂತ ತೋರಿ
ಮಾಡುವ ಮಸ್ಕರಿಗೆ
ನಾನು ಹಗ್ಗೀಸ ನಗುವುದಿಲ್ಲ
ಎಂದಿಗೂ ಸೋವಿಯಾಗಿ.

● **ಅಕ್ಷತಾ ಕೃಷ್ಣಮೂರ್ತಿ**